doc-567
T.P-2

Reg No B G 155 20 — 10 —72

In The State First Golden Jubilee Celebrated Paper 'Satyavadi' daily, Mysore 4

ಮೈಸೂರು ದಸರಾ ಸಾಂಸ್ಕೃತಿಕ ಮತ್ತು ಚಲನಚಿತ್ರ ಉತ್ಸವಗಳು

1972

ಮಹಾಜನರ ಕೋರಿಕೆಯ ಪ್ರಕಾರ

ಪದ್ಮಶ್ರೀ ಕುಮಾರಿ

ಯಾಮಿನಿ ಕೃಷ್ಣಮೂರ್ತಿಯವರಿಂದ

ಎರಡನೇ ಬಾರಿ ಭರತನಾಟ್ಯ

ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ

20 ನೇ ಅಕ್ಟೋಬರ್ 1972 ರಂದು ಮೈಸೂರು ಕ್ರಾಫರ್ಡ್ ಹಾಲ್‌ನಲ್ಲಿ

ಸಂಜೆ 5-30 ರಿಂದ ಕಾರ್ಯಕ್ರಮಗಳು ಪ್ರಾರಂಭವಾಗುವುವು

ಪ್ರಖ್ಯಾತ ಚಿತ್ರ ಕಲಾ ವಿದುಷಿ

ಜಯಭಾದುರಿ, ಅಮಿತಾಬ್‌ಬಚನ್

ಇವರು ತಾ. 20-10-72 ರ ಸಂಜೆ ಮೈಸೂರು ಕ್ರಾಫರ್ಡ್ ಹಾಲ್‌ನಲ್ಲಿ
20-10-1972 ರಂದು ಮಾರಾಟವಾದ ಟಿಕೆಟ್‌ಗಳ ಮೇಲೆ
ಲಕ್ಕಿ-ಡಿಪ್ ಟಿಕೆಟ್‌ಗಳನ್ನು ಎತ್ತುವರು ಮತ್ತು ಬಹುಮಾನ
ವಿನಿಯೋಗವನ್ನು ಮಾಡುವರು.

ಮತ್ತು

ಶ್ರೀಮತಿ **ಸಾಧನ ಸುರೇಶ್**ರವರಿಂದ

ಹಿಂದೂಸ್ತಾನಿ ಹಾಡುಗಾರಿಕೆ ಇದೆ

ಬಹುಮಾನಗಳು

ಮೊದಲನೆ ಬಹುಮಾನ ರೂ. 500/- ಬೆಲೆ ಬಾಳುವ ರೇಡಿಯೋ
ಎರಡನೆ ಬಹುಮಾನ ರೂ 300/- ಬೆಲೆ ಬಾಳುವ ಟ್ರಾನ್ಸಿಸ್ಟರ್ ರೇಡಿಯೋ
ಮೂರನೆ ಬಹುಮಾನ ರೂ. 250/- ಬೆಲೆ ಬಾಳುವ ಬೈಸಿಕಲ್
ನಾಲ್ಕನೆ ಬಹುಮಾನ ರೂ 200/- ಬೆಲೆ ಬಾಳುವ ಪ್ರೆಷರ್ ಕುಕ್ಕರ್

ವಸ್ತುಪ್ರದರ್ಶನದಿಂದ ಕ್ರಾಫರ್ಡ್‌ಹಾಲ್‌ಗೆ ಕಾರ್ಯಕ್ರಮಗಳು ಬದಲಾವಣೆ
ಆಗಿರುವ ವಿಚಾರವನ್ನು ಮಹಾಜನರು ಗಮನಿಸಬೇಕಾಗಿ ಕೋರಿದೆ.

— ಟಿಕೆಟ್ ಮಾರಾಟ ಮಾಡುವ ಸ್ಥಳ —

ಕ್ರಾಫರ್ಡ್ ಹಾಲ್, ಮೈಸೂರು

ಅಸಿಸ್ಟೆಂಟ್ ಡೈರೆಕ್ಟರ್‌ರವರ ಕಚೇರಿ,
ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆ, ವಸ್ತುಪ್ರದರ್ಶನ ಕಟ್ಟಡ, ಮೈಸೂರು

ಪ್ರವೇಶ ದರ : ರೂ. 15, 10, 5.

ಎಲ್ಲ ಫ್ರೀ ಪಾಸ್‌ಗಳನ್ನು ಮನ್ನಾ ಮಾಡಲಾಗಿದೆ

ಮೈಸೂರು ದಸರಾ ಸಾಂಸ್ಕೃತಿಕ ಮತ್ತು ಚಲನಚಿತ್ರ ಉತ್ಸವ
ಉಪ ಸಮಿತಿ ಅಧ್ಯಕ್ಷರಿಂದ ಪ್ರಕಟಿಸಲ್ಪಟ್ಟಿದೆ

ಸತ್ಯವಾದಿ

ಉಪಾಧ್ಯಾಯರ ಶಿಕ್ಷಣ ಸಂಸ್ಥೆಗೆ ಭೂಮಿ ನೀಡಿಕೆ

ಮೈಸೂರು ಲಲಿತ ಮಹಲ್ ಸುತ್ತಮುತ್ತ ಇರುವ 10ಎಕರೆ ಭೂಮಿಯನ್ನು ಸ್ಕೌಟ್‌ಗೆ ಮಂತ್ರಿ ಶ್ರೀ ಅಜೀಜ್ ಸೇಟ್‌ರವರು ಉಪಾಧ್ಯಾಯರ ಶಿಕ್ಷಣ ಸಂಸ್ಥೆಗೆ ಇತ್ತರು. ಈಗಿರುವ ಸಂಸ್ಥೆಯ ಸ್ಥಳದಲ್ಲಿ ಪರಸ್ಥಳಕ್ಕೆ ಹೋಗಿಬರುವ ಬಸ್ ನಿಲ್ದಾಣವನ್ನು ನಿರ್ಮಾಣ ಮಾಡಲಾಗುವುದು.

★

ಶಾಸನ ಸಭೆ ಒತ್ತಾಯ ಮಾಡಿದರೆ ಪರಿಶೀಲನೆ

ಎಕ್ಸ್‌ಪೊ 40 ರ ವಿಚಾರ ಹಳೆಯದಾಗಿ ಹೋಗಿದೆಯೆಂದು, ಅದರ ತನಿಖೆ ಅವಶ್ಯಕತೆ ಈಗ ಇಲ್ಲವೆಂದು, ಆದರೆ ಶಾಸನ ಸಭೆ ಈ ವಿಚಾರ ಒತ್ತಾಯ ಮಾಡಿದರೆ ಪರ್ಯಾಲೋಚನೆ ಮಾಡಲಾಗುವುದೆಂದು ಮುಖ್ಯ ಮಂತ್ರಿ ಶ್ರೀ ಡಿ. ದೇವರಾಜ ಅರಸ್‌ರವರು ಮಂಡ್ಯದಲ್ಲಿ ಬಹಿರಂಗ ಸಭೆಯೊಂದರಲ್ಲಿ ಪ್ರಶ್ನೆಯೊಂದಕ್ಕೆ ಉತ್ತರ ಕೊಡುತ್ತಾ ತಿಳಿಸಿದರು.

ಗುಜರಿಯ ಹೊಸ ಸ್ಥಳ

ಮೈಸೂರು— ಗುಜರಿಯು ಈಗಿರುವ ಸ್ಥಳದಿಂದ ಕ್ವೀನ್ಸ್‌ಪ್ರದಲ್ಲೇ ವೆಲಿಂಗ್ಟನ್ ಲಾಡ್ಜಿಗೆ ಬದಲಾಯಿಸುವ ಸಂದರ್ಭದಲ್ಲಿ, ಅಲ್ಲಿ ನಿರ್ಮಿಸುವ ಕಟ್ಟಡದ ಶಂಕು ಸ್ಥಾಪನೆಯನ್ನು ವಿದ್ಯಾಮಂತ್ರಿ ಶ್ರೀ ಬದ್ರಿನಾರಾಯಣ್‌ರವರು ನೆರವೇರಿಸಿದರು – 2 ಹಂತಗಳಲ್ಲಿ 125 ಸ್ಟಾಲುಗಳು, ಬಿಚ್ಚುವ ಮತ್ತು ರಾತ್ರಿ ಹಾಕುವ ಸ್ಥಳವಿರುವುದು : ರೂ. 5 ಲಕ್ಷ ಖರ್ಚಾಗುವುದು – ಅಧ್ಯಕ್ಷತೆ ವಹಿಸಿದ್ದ ಮಂತ್ರಿ ಶ್ರೀ ಅಜೀಜ್ ಸೇಟ್‌ರವರು, ಈ ಹೊಸ ಗುಜರಿಯು ಇತರ ನಗರಗಳ ಗುಜರಿಗಳಿಗೆ ಮಾದರಿಯಾಗಿರುವುದೆಂದು ಹೇಳಿದರು.

ಯಶಸ್ವಿ ಬಂದ್

ಗೌಹತಿ— ವಿದ್ಯಾರ್ಥಿ ಸಂಘ ಕರೆದಿದ್ದ ಬಂದ್ ಯಶಸ್ವಿಯಾಗಿ ನಡೆಯಿತು. ವಿಶಾಲ ಗೌಹತಿಯಲ್ಲಿ ಕೆಲಸಕಾರ್ಯ ತಣ್ಣಗಾಗಿತ್ತು.

★ ರಾಜ್ಯದ ಹೆಸರು ಕರ್ನಾಟಕ ಆಗಲು ಸ್ವಲ್ಪ ಕಾಲಾವಕಾಶ ಬೇಕೆಂದು ರೈಲ್ವೆ ಮಂತ್ರಿ ಶ್ರೀ ಟಿ. ಎ. ಪೈರವರು ಮಂಗಳೂರಿನಲ್ಲಿ ತಿಳಿಸಿದರು.

★

ದಸರಾ ವಸ್ತುಪ್ರದರ್ಶನ

ಮೈಸೂರು

ಪ್ರಕಟಣೆ

ಈ ದಿನ ದಸರಾ ವಸ್ತುಪ್ರದರ್ಶನದಲ್ಲಿ ಏರ್ಪಾಡಾಗಿದ್ದ ಶ್ರೀಮತಿ ಜಯಲಲಿತ ಅವರ ವಿಶೇಷ ನೃತ್ಯ ಕಾರ್ಯಕ್ರಮವನ್ನು ಅನಿವಾರ್ಯ ಕಾರಣಗಳಿಂದ ನಿಲ್ಲಿಸಲಾಗಿದೆ

ಕಾರ್ಯದರ್ಶಿಯವರು
ದಸರಾ ವಸ್ತುಪ್ರದರ್ಶನ ಸಮಿತಿ, ಮೈಸೂರು.

★

ವಾರ್ತೆಗಳು

ಪಿಸ್ತೂಲು ಕಳವು— ತ್ರಿವೇಂದ್ರಂನಲ್ಲಿಯ ಅಖಿಲ ಭಾರತ ವಸ್ತುಪ್ರದರ್ಶನದಲ್ಲಿ ಪ್ರದರ್ಶಿಸಲಾಗಿದ್ದ 9 ಮಿಲಿಮೀಟರು ಪಿಸ್ತೂಲು ನಾಪತ್ತೆಯಾಗಿದೆ.

ಹೊರಗಿನ ನೆರವು— ನವೆಹಲಿ ವಾರ್ತೆಯಂತೆ ಹೊರಗಿನ ನೆರವಿನ ಮೇಆ ಭರವಸೆ ಹೊಂದಿರುವುದು 1979 ಕ್ಕೆ ಮುಕ್ತಾಯಗೊಳ್ಳುವದೆಂದು ಪ್ಲಾನಿಂಗ್ ಕಮಿಷನ್ನಿನ ಪ್ಲಾನ್ ಆಗಿದೆ.

ಧರ್ಮತೇಜರಿಗೆ ಶಿಕ್ಷೆ— ನವದೆಹಲಿ ದೆರ್ಘ ಜಡ್ಜರು ಮಾಜಿ ಜಯಂತಿ ಹಡಗು ಕಂಪೆನಿ ಧರ್ಮ ತೇಜರಿಗೆ ಅನೇಕ ತಕ್ಸೀರುಗಳಿಗಾಗಿ 3 ವರ್ಷ ಕಠಿಣ ಸಜಾ ಮತ್ತು ರೂ. 1413000 ಜುಲ್ಮಾನೆ ವಿಧಿಸಿದರು ; ಜಲ್ಮಾನೆ ಕೊಡದಿದ್ದರೆ ಮತ್ತೆ 3 ವರ್ಷ ಸಜ ಅನುಭವಿಸಬೇಕು.

ಜಾಗರೂಕತೆಯಿಂದಿರಲು— ಮುಂಬರುವ ದೀಪಾವಳಿ ಹಬ್ಬದಲ್ಲಿ ಬಾಣಬಿರುಸು ಉಪಯೋಗಿಸುವಾಗ ವಿಶೇಷ ಜಾಗರೂಕತೆಯಿಂದ ವರ್ತಿಸಬೇಕೆಂದೂ, ಈ ಸಂಬಂಧವಾಗಿ ಅಧಿಕಾರ ಹೊಂದಿರುವವರು ಜಾರಿ ಮಾಡುವ ನಿಷೇಧಾಜ್ಞೆಗಳನ್ನು ತಪ್ಪದೆ ಪರಿಪಾಲಿಸಬೇಕೆಂದೂ ರಾಜ್ಯ ಸರಕಾರದ ಅಧಿಕಾರಿಗಳು ಸಾರ್ವಜನಿಕರಲ್ಲಿ ವಿನಂತಿ ಮಾಡಿದ್ದಾರೆ.

ಮೈಸೂರು ದಸರಾ ವಸ್ತುಪ್ರದರ್ಶನ

ಮತ್ತು

ಕೈಗಾರಿಕಾ ಮೇಳ 1972

ರ

ವಿಶೇಷ ಕಾರ್ಯಕ್ರಮ

ಶುಕ್ರವಾರ 20-10-1972 ಸಂಜೆ 7 ಗಂಟೆಗೆ
ಚಿತ್ರತಾರೆ ಜಯಲಲಿತ ನೃತ್ಯ

ಶನಿವಾರ 21-10-1972 ಸಂಜೆ 7 ಗಂಟೆಗೆ
ಶ್ರೀ ರವಿ ಕಲಾವಿದರು, ಮೈಸೂರು
[ಚಿತ್ರ ಕಲಾವಿದರಾದ ಅಶ್ವತ್ಥ್, ಶ್ರೀನಾಥ್, ದ್ವಾರಕೀಶ್ ಮತ್ತು ಬಿ. ವಿ. ರಾಧ ಮುಂತಾದವರು]
" ಬಹಾದೂರ್ ಗಂಡ " ನಾಟಕ

ಭಾನುವಾರ 22-10-1972
ಹಿನ್ನಲೆ ಗಾಯಕಿ ಶ್ರೀಮತಿ ಎಸ್. ಜಾನಕಿ ಮತ್ತು ಪಾರ್ಟಿ
ಸಂಗೀತ – ಚಿತ್ರಗೀತೆಗಳು

ಮೈಸೂರಿನ ಶ್ರೀರಂಗ ಮಿತ್ರ ಮಂಡಲಿ (ದ್ವಾರಕೀಶ್ ಮತ್ತು ಪಾರ್ಟಿ)
ನಾಟಕ – " ಮುದುಕಾವತಾರ "

ಸೋಮವಾರ 23-10-1972 ಸಂಜೆ 7 ಗಂಟೆಗೆ
ನಾಟ್ಯಕಲಾವಿಶಾರದ ಶ್ರೀ ಎ. ಎಸ್. ಶೇಷಾಚಾರ್ಲುರವರ ನಾಟಕ ಮಂಡಲಿ
ನಾಟಕ – " ಎಚ್ಚಮ್ಮನಾಯಕ "

ಶನಿವಾರ 28-10-1972
ಗೋಕಾಕದ ಶ್ರೀ ಶಾರದಾ ಸಂಗೀತ ನಾಟಕ ಮಂಡಲಿ (ಹೊಸಮನಿ ಸಹೋದರರು)
ನಾಟಕ – " ಬಂಜೆ ತೊಟ್ಟಿಲು "

ಮೈಸೂರು
13-10-1972

ಹೆಚ್. ಆರ್. ಗಂಗಣ್ಣ,
ಕಾರ್ಯದರ್ಶಿ,
ಮೈಸೂರು ದಸರಾ ವಸ್ತುಪ್ರದರ್ಶನ ಸಮಿತಿ

Contribute Liberally to the National Defence Fund

ವುಡ್‌ಲಾಂಡ್ 20-10-72 ರಿಂದ ಅಮೋಘ 4ನೇ ವಾರ

ರಾಜೇಂದ್ರ ಕುಮಾರ್ ಅರ್ಪಿಸುವ ರೋಸ್ ಮೂವೀಸ್‌ರವರ
ಹಿಂದಿ ಕಲರ್ ಅತ್ಯಮೋಘ ಚಿತ್ರ

ಜವಾನಿ ದಿವಾನಿ

ಪಾತ್ರ – ರಣಧೀರ್ ಕಪೂರ್, ಜಯಬಾಧುರಿ • ದಿನ 3 ಪ್ರದರ್ಶನಗಳು

ಅಪೆರಾ 13 10 72 ರಿಂದ

ಬಾಂಧವ್ಯ

ಪಾತ್ರ – ಅಶ್ವತ್ಥ್, ಗಂಗಾಧರ್, ರಾಜೇಶ್, ಬಿ. ವಿ. ರಾಧ, ಪಂಡರೀಬಾಯಿ,
ಸಂಧ್ಯ ರಾಣಿ, ಜಯಶ್ರೀ, ರಮಾದೇವಿ ದಿನ 3 ಪ್ರದರ್ಶನಗಳು

SHAKTI SUDHA

A Superb Tonic

Help The Gorakshana

— Humanitarian Propoganda Monthly ....

Protect the Cow

Quality Printing——Neat-Binding

Lakshminarasimha Press

Sivarampet, Mysore

Edited Printedand Published by Dharmapracharanirata M S Krishna Rao (Propretor) at the Satyavadi Press Chamarajapuram Mysore